**ಸಾಕ್ಷಿಯನ್ನು ದಿನಾಂಕ 20-07-2026 ರಂದು ಸತ್ಯಪ್ರಮಾಣ ಭೋಧಿಸಲಾಯಿತು.**

**ಪಾಟಿ ಸವಾಲುಃ 1, 2, 5 ರಿಂದ 7 ನೇ ಪ್ರತಿ ವಾದಿಯ ಪರ ಶ್ರೀ ಎ ಕೆ ಪಿ ವಕೀಲರಿಂದಃ**

ಸಾಕ್ಷ್ಯಾ ಪ್ರಮಾಣಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ. ವಾದಿ-ಪ್ರತಿವಾದಿಯರ ತಂದೆ ಮೃತ ಬಸಲಿಂಗಪ್ಪನಾಗಿರುತ್ತಾನೆ ಮತ್ತು ಮೃತ ಬಸಲಿಂಗಪ್ಪ ಈತನೇ ಕುಟುಂಬದ ಮೂಲ ಪುರುಷನಾಗಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿಗಳೆಲ್ಲವೂ ಮೂಲ ಪುರುಷ ಬಸಲಿಂಗಪ್ಪನ ಸ್ವಂತ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ಸುಮಾರು 35-40 ವರ್ಷಗಳಿಂದ ಬಳ್ಳಾರಿಯ ಸಿಂಧಗೇರಿಯಲ್ಲಿ ಗಂಡನ ಜೊತೆಗೆ ಬಸಲಿಂಗಮ್ಮ ವಾಸವಾಗಿರುತ್ತಾಳೆ. ದಾವಾ ಆಸ್ತಿಗಳ ದಾಖಲೆಗಳನ್ನು ನಾನು ನೋಡಿದ್ದೇನೆ. ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ, ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಯಾರು ಯಾರ ಹೆಸರಿಗೆ ಇರುತ್ತವೆ ಎನ್ನುವ ಬಗ್ಗೆ ಮಾಹಿತಿ ಇಲ್ಲ. 3 ವಾಣಿಜ್ಯ ಅಂಗಡಿಗಳನ್ನು ಜಂಟಿ ಕುಟುಂಬದ ಆದಾಯದಿಂದ ಬಂದ ಬಂಡವಾಳವನ್ನು ಸದರಿ ಅಂಗಡಿಯಲ್ಲಿ ತೊಡಗಿಸಿರುತ್ತಾರೆ ಎಂಬುದು ನನಗೆ ವೈಯಕ್ತಿಕವಾಗಿ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಒಂದೇ ಕುಟುಂಬದ ಜಮೀನು ಕಲಿತುಕೊಂಡು ಸಾಗುವಳಿ ಮಾಡಿ 1 ವರೆಯಿಂದ 2 ಕೋಟಿ ಆದಾಯದಿಂದ 1 ರಿಂದ 3 ಅಂಗಡಿಗಳನ್ನು ಮಾಡಿದ್ದಾನೆ. ಅಷ್ಟು ಕೋಟಿ ಆದಾಯ ಬಂದಿತ್ತು ಎಂದು ತೋರಿಸಲು ನಾನು ದಾಖಲಾತಿಯನ್ನು ಹಾಜರು ಮಾಡಿಲ್ಲ. ದಿಃ 10-07-2015 4 ಮಂದಿ ಪಂಚರು ಕೂಡಿಕೊಂಡು ಅಣ್ಣತಮ್ಮದಿಂದರು ತಮ್ಮ ತಮ್ಮ ಭಾಗವನ್ನು ಕೊಟ್ಟು ಬಿಡಿ ಎಂದು ಹೇಳಿ ಆ ಬಗ್ಗೆ ಅವರು ಜಗಳವಾಡಲು ಆರಂಭಿಸಿದರು, ಆಗ ನಾನು ನಮ್ಮ ಮನೆಗೆ ಹೋದೆವು. ಆ ಪಂಚಾಯತಿಯಲ್ಲಿ ನಾನು, ಪಂಪಣ್ಣ, ವಲಿಸಾಬ, ಕಲ್ಲಯ್ಯ ಮತ್ತು ಇರತರರು ಇದ್ದರು. ಇತರರು ಯಾರು ಇದ್ದರು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಕಲ್ಲಯ್ಯ ಪೂಜಾರಿ ಅವರ ಮನೆತನದ ಹೆಸರಾಗಿರುತ್ತದೆ. ನಾನು ಹೇಳಿದಂತೆ ಯಾವುದೇ ಪಂಚಾಯತಿ ಮಾಡಿಲ್ಲ ಮತ್ತು ಅಂತಹ ಪಂಚಾಯತಿಯಲ್ಲಿ ನಾನು ಹೇಳಿದ ವ್ಯಕ್ತಿಗಳು ಯಾರೂ ಕೂಡಿಲ್ಲ, ಆದರೂ ಆ ಬಗ್ಗೆ ನಾನು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೆನ್ನಬಸಪ್ಪ, ವಿರುಪಾಕ್ಷಪ್ಪ, ನಿಂಗಪ್ಪ, ಪಂಪಾಪತಿ ಯವರು ಆ ಪಂಚಾಯತಿಗೆ ಬಂದಿದ್ದರು. 2005 ರಲ್ಲಿ ಚೆನ್ನಬಸಪ್ಪ ಮತ್ತು ವಿರುಪಾಕ್ಷಪ್ಪ ತೀರಿಕೊಂಡಿದ್ದಾರೆ. ಬಸಲಿಂಗಪ್ಪನ ಸ್ವಂತ ಆಸ್ತಿಯನ್ನು ಆತನ ಗಂಡುಮಕ್ಕಳು ಹಂಚಿಕೊಂಡಿದ್ದಾರೆ ಎನ್ನುವುದು ಗೊತ್ತಿಲ್ಲ. ಪಂಪಾಪತಿ ಮತ್ತು ನಿಂಗಪ್ಪ ಅವರಿಗೂ ಬಹಳ ದಿನಗಳಿಂದ ಸಂಬಂಧ ಚೆನ್ನಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು 4 ಮತ್ತು 5 ನೇ ಪ್ರತಿವಾದಿಯವರ ಮಧ್ಯೆ ಸಂಬಂಧ ಚೆನ್ನಾಗಿರಲಿಲ್ಲ, ಆದ್ದರಿಂದ ನಾನು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೂಲ ಪುರುಷ ಬಸಲಿಂಗಪ್ಪನ ಸ್ವಂತ ಆಸ್ತಿಗಳಾಗಿದ್ದರಿಂದ ಈ ಆಸ್ತಿಗಳಲ್ಲಿ ವಾದಿಗೆ ಯಾವುದೇ ರೀತಿಯ ಹಕ್ಕು, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಜಿ. ಬಿ. ಹಳ್ಯಾಕಾಯಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.